**ನ್ಯಾಯಾಲಯದ ಆದೇಶದ ಮೇರೆಗೆ ಸಾಕ್ಷಿಯನ್ನು ದಿನಾಂಕ *16.06.2025* ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತುಃ**

**ಪಾಟೀ ಸವಾಲುಃ ಆರೋಪಿತರ ಪರ ವಕೀಲರವರಿಂದಃ**

. ನಾನು ಮರಗಳನ್ನು ಖರೀದಿ ಮಾಡಿದ್ದೆ ಎಂದು ತೋರಿಸುವ ಬಗ್ಗೆ ನನ್ನ ಕಡೆ ಯಾವುದೇ ದಾಖಲೆ ಇರುವುದಿಲ್ಲ. ನಾನು ಮರಗಳನ್ನು ಕಟ್ ಮಾಡಿದ ಬಗ್ಗೆ ನೋಡಿದವರು ಗ್ರಾಮದಲ್ಲಿ ಯಾರು ಇರುವುದಿಲ್ಲ. ಆಲತ್ತೂರು ಗ್ರಾಮದಿಂದ ಮರಗಳು ಇದ್ದವು ಎಂದು ಹೇಳುವ ಸ್ಥಳಕ್ಕೆ ಸುಮಾರು 40 ಕಿಮೀ ಅಂತರ ಇರುತ್ತದೆ. ನಾನು ಮೊದಲು ಆ ಜಮೀನನ್ನು ನೋಡಿರುವುದಿಲ್ಲ ಮತ್ತು ಆ ಜಮೀನಿನ ಆಜು ಬಾಜು ಯಾರ ಜಮೀನು ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಮರಗಳನ್ನು ಯಾರು ಯಾರು ಕಟ್ ಮಾಡಿದ್ದರು ಎನ್ನುವ ಬಗ್ಗೆ ಮಾಹಿತಿಯನ್ನು ನಾನು ಪೊಲೀಸರಿಗೆ ಹೇಳಿರಲಿಲ್ಲ. ಮರಗಳನ್ನು ಕಟ್ ಮಾಡುವಾಗ, ಮರಗಳನ್ನು ಕಟ್ ಮಾಡಬೇಡ ಎಂದು ಹೇಳಿ ಯಾರು ತಕರಾರು ಮಾಡಿರುವುದಿಲ್ಲ. ಪೊಲೀಸರು ನನ್ನನ್ನು ಕರೆಸಿ ಜಾಗವನ್ನು ತೋರಿಸಿ ಮಹಜರ್ ಕ್ರಮ ಜರುಗಿಸಿರುವುದಿಲ್ಲ. ಪುನಃ ಮರಗಳು ಏನಾಯಿತು ಎನ್ನುವ ಬಗ್ಗೆ ಗೊತ್ತಿರುವುದಿಲ್ಲ ಮತ್ತು ಅವುಗಳನ್ನು ತೆಗೆದುಕೊಂಡು ಹೋಗಿರುವುದಿಲ್ಲ. ನನಗೆ ಮೃತನ ಮನೆಯವರು ಗೊತ್ತಿರುವುದಿಲ್ಲ. ನಾನು ಪರಶಿವಪ್ಪನ ಹತ್ತಿರ ಮರಗಳನ್ನು ಖರೀದಿ ಮಾಡಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಆ ಸ್ಥಳಕ್ಕೆ ಎಂದು ಹೋಗಿಲ್ಲ ಎಂದರೆ ಸರಿ. ನಾನು ಪೊಲೀಸರ ಹೇಳಿಕೆಯ ಮೇರೆಗೆ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ– ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

***ಓ ಹೇ ಕೇ ಸ ಇ ಎ ಒ.,***

***4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,***
**ಮೈಸೂರು**